**ಓಎಸ್ ಸಂಖ್ಯೆಃ 59/2021 ಡಿ.ಡಬ್ಲ್ಯೂಃ1**

**ದಿನಾಂಕಃ 21.07.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ**

ಆಲದಕಟ್ಟಿ ಗ್ರಾಮದ ಸರ್ವೆ ನಂಬರ 111/1ಬ/2ಬ/1 ನೇದ್ದರ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-6 ಎಂದು ಗುರುತಿಸಲಾಯಿತು.

ನನ್ನ ತಂದೆ ಖರೀದಿಸಿದ ಖರೀದಿ ಪತ್ರ ದಿನಾಂಕ 01.06.1950 ರ ಮೂಲಕ ಖರೀದಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ.7 ಎಂದು ಗುರುತಿಸಲಾಯಿತು.

ಹಲಗೇರಿ ಗ್ರಾಮದ ಸರ್ವೆ ನಂಬರ 218/ಅ/4 ನೇದ್ದರ ಕೈ ಬರಹ ಪಹಶಣಿ ಪತ್ರಿಕೆ 1999-2000 ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-8 ಎಂದು ಗುರುತಿಸಲಾಯಿತು.

ಹಲಗೇರಿ ಗ್ರಾಮದ ಸರ್ವೆ ನಂಬರ 218/ಬ ನೇದ್ದರ ಕೈ ಬರಹ ಪಹಣಿ ಪತ್ರಿಕೆ 1999-2000 ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-9 ಎಂದು ಗುರುತಿಸಲಾಯಿತು.

ಹಲಗೇರಿ ಗ್ರಾಮದ ಸರ್ವೆ ನಂಬರ 218/ಅ ನೇದ್ದರ ಕೈ ಬರಹ ಪಹಣಿ ಪತ್ರಿಕೆ 1985-86 ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-10 ಎಂದು ಗುರುತಿಸಲಾಯಿತು.

ಹಲಗೇರಿ ಗ್ರಾಮದ ಸರ್ವೆ ನಂಬರ 218/ಅ ನೇದ್ದರ ಕೈ ಬರಹ ಪಹಣಿ ಪತ್ರಿಕೆ 1989-90 ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-11 ಎಂದು ಗುರುತಿಸಲಾಯಿತು.

ಕರಾರು ಪತ್ರದ ದಾಖಲೆಯನ್ನು ನೋಡಿ ಗುರುತಿಸಿದ್ದು ಅದು ಕಡಿಮೆ ಸಾಂದ್ರತೆ ಹೊಂದಿದ್ದು ವಾದಿ ಪರ ವಕೀಲರು ವಾದಿಸಿದ್ದು ದಾಖಲೆಯನ್ನು ನೋಡಿಲಾಗಿ ಅದನ್ನು ಕಬ್ಜಾ ಸಹಿತವಾಗಿ ಖರೀದಿ ಕಾರಾರು ಪತ್ರ ಮಾಡಿದ್ದು ಕಂಡು ಬರುತ್ತದೆ. ಕಾರಣ ದಾಖಲೆಯ ಮೇಲೆ ಸುನಾವಣೆ ಆಗುವ ಅವಶ್ಯಕತೆ ಇರುವದರಿಂದ ಈ ಹಂತದಲ್ಲಿ ನಿಶಾನೆ ಎಂದು ಗುರುತಿಸಿರುವುದಿಲ್ಲ.

ಸದರಿ ಕಲಂ.90 ಸಾಕ್ಷ್ಯ ಅಧಿನಿಯಮದ 30 ವರ್ಷದ ಹಳೆಯ ದಾಖಲೆಯು ಆಗಿದ್ದರಿಂದ ಅದನ್ನು ನಿಶಾನೆ ಎಂದು ಗುರುತಿಸಲು ಬರುತ್ತದೆ, ಕಲಂನ್ನು ಓದಿ ನೋಡಿ ಎಂದು ಪ್ರತಿವಾದಿ 3 ನೇ ಪರ ವಕೀಲರು ತಿಳಿಸಿದ್ದು, ಅದು ಅಲ್ಲದೇ ಭಾರತೀಯ ನೊಂದಣಿ ಕಾಯದೆ 2000 ನಂತರ ತಿದ್ದುಪಡೆಯಾಗಿದ್ದರಿಂದ ಸದರಿ ದಾಖಲೆಯನ್ನು ಗುರುತಿಸಲು ಸೂಚಿಸಿದ್ದು ಇದೆ. ಸದರಿ ಈ ದಾಖಲೆಯ ಮೇಲೆ ಆದೇಶ ಮಾಡಬೇಕಾಗಿದ್ದರಿಂದ ಮುಂದೂಡಲಾಯಿತು.

**ಮರು ವಿಚಾರಣೆಃ** **ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.)**

ಸಹಿ/-

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರು.**

**ಸಾಕ್ಷಿದಾರರ ಸಹಿಃ**

**ಸಹಿ/-**